ಪ್ರಾರಂಭ ಮಾಡಿಲ್ಲ. ಬಹಳ ಡಿಲೇ ಆಗುತ್ತಿದೆ. ಬಹುಶಃ ಈ ಯೋಜನೆ ಬಿಟ್ಟರೆ ಬೇರೆ ಯಾವ ಯೋಜನೆಯೂ ಆ ತಾಲ್ಲೂಕಿನಲ್ಲಿ ಇಲ್ಲ. ಈ ಯೋಜನೆಯನ್ನು ಸಕಾಲದಲ್ಲಿ ಮುಗಿಸಿದ್ದರೆ ಒಂದು ಎಕರೆಗೆ ನೀರಾವರಿ ಮಾಡುವುದಕ್ಕೆ ಎಷ್ಟು ಖರ್ಚು ಆಗುತ್ತಿತ್ತೋ ಈಗ ಅದರ ಪ್ರಮಾಣ ಎಷ್ಟು ಆಗಿದೆ ಎನ್ನುವುದನ್ನು ದಯಮಾಡಿ ತಿಳಿಸಿ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, 5 ವರ್ಷಗಳ ಅವಧಿಯಲ್ಲಿ ಈ ಯೋಜನೆಯನ್ನು ಪೂರೈಸಿದರೆ ನಾವು ಇನ್ನೂ ಇಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾಗಿರಲಿಲ್ಲ. ಆದರೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾವು ವ್ಯಾಪಕವಾದಂತಹ ನೀರಾವರಿ ಕಾಮಗಾರಿಗಳನ್ನು ಇಡೀ ರಾಜ್ಯದಲ್ಲಿ ಕೈಗೆ ತೆಗೆದುಕೊಂಡಿರುವುದರಿಂದ ಸಂಪನ್ಮೂಲಗಳನ್ನು ಯಾವ ಪ್ರಮಾಣದಲ್ಲಿ ಯಾವ ಯೋಜನೆಗೆ ಕೊಡಬೇಕು ಎನ್ನುವುದರ ಬಗ್ಗೆ ನಮ್ಮ ಕೈಗಳು ಕಟ್ಟಿರುವುದರಿಂದ ಈ ಯೋಜನೆಯು ಮಂದಗತಿಯಲ್ಲಿ ನಡೆಯುತ್ತಿದೆ. ಹೋದ ವರ್ಷದ ಹಣಕಾಸಿನ ವರ್ಷದಲ್ಲಿ 18 ಕೋಟಿಯನ್ನು ಇದಕ್ಕೆ ನಿಗದಿ ಮಾಡಿದ್ದು 8 ಕೋಟಿಯನ್ನು ಮಾತ್ರ ಜನವರಿಯವರೆಗೆ ಖರ್ಚು ಮಾಡಲಾಗಿದೆ. 94-95ನೇ ಇಸವಿಯ ಬಜೆಟ್ನಲ್ಲಿ ಕೂಡ ಸುಮಾರು ಹದಿನೆಂಟುವರೆ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ರಸ್ತೆ ಹಾಗೂ ಕಟ್ಟಡಗಳ ಮೇಲಣ ವೆಚ್ಚವಾದ ಹಣದ ವಿವರ ಕುರಿತು

607 - ಶ್ರೀಮತಿ. ಸುಮ ವಸಂತ (ವಿರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93 ಮತ್ತು 1993-94ನೇ ಸಾಲಿನಲ್ಲಿ ಆಯವ್ಯಯದಲ್ಲಿ ಕಟ್ಟಡ ಮತ್ತು ರಸ್ತೆ ಅಭಿವೃದ್ಧಿಗೆ ಕೊಡಗು ಜಿಲ್ಲೆಗೆ ಮಂಜೂರಾದ ಹಣ ಎಷ್ಟು?

ಆ) ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?

ಇ) ಹಣ ಬಿಡುಗಡೆ ಸರಿಯಾಗಿ ಆಗದೆ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗದೆ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಉ) ಆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸರ್ಕಾರದಿಂದ ಬಿಡುಗಡೆಯಾದ ಹಣ ಭರವಸೆ ಪತ್ರ ಅನುಸರಿಸಿ ಆಯಾ ವಿಭಾಗದ ಅನುದಾನ ಲಭ್ಯತೆಯಂತೆ ಹಂಚಲಾಗಿದೆ.

ಈ) ಕೆಲಸ ಯಾವುದೂ ನಿಂತಿರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಕೊಡಗು ಜಿಲ್ಲೆಯಲ್ಲಿ ಕಾಮಗಾರಿಗಳ ಬಗ್ಗೆ ಆರ್ಥಿಕ ಪ್ರಗತಿಯ ವಿವರ

(ಲಕ್ಷ ರೂ.ಗಳು)

	92-93		93-94	
ಕಾಮಗಾರಿಗಳು	ಮಂಜೂರಾದ ಹಣ	ಹಣ ಬಿಡುಗಡೆಯಾಗಿ 92 93ರಲ್ಲಿ ಆಗಿರುವ ವೆಚ್ಚ	ಮಂಜೂರಾದ ಹಣ	ಹಣ ಬಿಡುಗಡೆಯಾಗಿ ಫೆಬ್ರವರಿ 94 ರವರೆಗೆ ಆಗಿರುವ ವೆಚ್ಚ
ರಸ್ತೆಗಳು	163.45	166.44	393.47	119.94
ಕಟ್ಟಡಗಳು	70.30	67.74	113.91	39.80
ಒಟ್ಟು	233.85	234.28	507.38	159.74

ಶ್ರೀಮತಿ ಸುಮಾ ವಸಂತ್: ಮಾನ್ಯ ಅಧ್ಯಕ್ಷರೇ, ನಾನು ಈ ದಿನ ಒಂದು ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಕೊಡಗು ಜಿಲ್ಲೆಯಲ್ಲಿ ತಮಗೆಲ್ಲಾ ತಿಳಿದ ಹಾಗೆ ಅಲ್ಲಿ 8 ತಿಂಗಳು ಮಳೆ ಇರುತ್ತದೆ. ಕೇವಲ 4 ತಿಂಗಳು ಮಾತ್ರ ಕೆಲಸ ಕಾರ್ಯಗಳನ್ನು ಮಾಡಬಹುದು. 1993-94ನೇ ಸಾಲಿನಲ್ಲಿ 393 ಲಕ್ಷ ರೂಪಾಯಿಗಳು ಮಂಜೂರಾಗಿದ್ದ ಹಣದಲ್ಲಿ ಕೇವಲ 119 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಎಂದು ಹೇಳಿ ಇಲ್ಲಿ ಉತ್ತರದಲ್ಲಿ ಕೊಟ್ಟಿದ್ದಾರೆ. 93-94ನೇ ಸಾಲಿನಲ್ಲಿ ಮಂಜೂರಾಗಿದ್ದ ಹಣವನ್ನು ಖರ್ಚು ಮಾಡಿದ್ದ ಮೇಲೆ ಇವರು 94-95ನೇ ಸಾಲಿನಲ್ಲಿ ಏನು ಹಣ ಬಿಡುಗಡೆ ಮಾಡುತ್ತಾರೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಅದು ಒಂದು ಹೈಪೋಥಿಕೇಟಿಡ್. ಇದು ಅವರು ಊಹೆ ಮಾಡಿರತಕ್ಕಂಥ ಪ್ರಶ್ನೆಗೆ ಉತ್ತರ ಏನು ಹೇಳುವುದಕ್ಕೆ ಆಗುತ್ತದೆ ಅಂದರೆ ಹಣ ಖರ್ಚಾಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ 393 ಲಕ್ಷ ರೂಪಾಯಿಗಳು ಮಂಜೂರಾಗಿದ್ದು ಅಲ್ಲಿ ಬಿಡುಗಡೆ ಆಗಿರತಕ್ಕಂಥಾದ್ದು 119 ಲಕ್ಷ ರೂ.ಗಳು ಆ 393 ರಲ್ಲಿ ಒಂದು ಕೋಟಿ ಎಪ್ಪತ್ತು ಲಕ್ಷದ ಒಂದು ಸೇತುವೆ ಕೂಡ ಸೇರಿದೆ. ಮೊನ್ನೆ ಮೊನ್ನೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ವಿಚಾರ ಮಾಡಿದೆ. ಅದ್ದರಿಂದ ಅದನ್ನು ಕಳೆದರೆ 1 ಕೋಟಿ 6 ಲಕ್ಷದಷ್ಟು ಹಣ ಒದಗಿಸಲು ಆಗಿಲ್ಲ. ಅದರಿಂದ ನನಗೆ ಸಂತೋಷ ಆಗಿದೆ ಎಂದು ನಾನು ಅಂದುಕೊಳ್ಳುವುದಿಲ್ಲ. 92-93ರಲ್ಲಿ ಒದಗಿಸಿದ ಹಣ ಅದಕ್ಕಿಂತಲೂ ಸ್ವಲ್ಪ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಕೊಡಗು ಜಿಲ್ಲೆಗೆ ಹಚ್ಚು ಹಣ ನಾವು ಕೊಡಬೇಕಾಗಿದೆ. ಅಲ್ಲಿ ಖರ್ಚು ಮಾಡತಕ್ಕಂತಹ ಹಣ ರಸ್ತೆಗಳ ಮೇಲೆಯೇ. ನಾವು ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಕಾರಣಾಂತರಗಳಿಂದ ಹಣ ಖರ್ಚು ಮಾಡಲಿಕ್ಕೆ ಸಾಧ್ಯವಾಗಲ್ಲ. ಮಾನ್ಯ ಸದಸ್ಯರ ಕಳಕಳಿಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಹೆಚ್ಚು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಸುಮಾ ವಸಂತ್: ಮಾನ್ಯ ಅಧ್ಯಕ್ಷರೇ ಒಂದು ವಿಚಾರ ಹೇಳುವುದಕ್ಕೆ ಬಯಸುತ್ತೇನೆ. ವೀರರಾಜಪೇಟೆ ಕೇರಳ ಮತ್ತು ಮಾಕೂಟ ರಸ್ತೆ ಅದಕ್ಕೆ ಕಳೆದ ಸಾರಿ 15 ಲಕ್ಷ ಬಿಡುಗಡೆ ಆಗಿತ್ತು ಅದರ ಆಡಳಿತಾತ್ಮಕ ಮಂಜೂರಾತಿಗೆ ಫೈಲು

ಇನ್ನೂ ಇಲ್ಲೇ ಇದೆ. ಮಾರ್ಚಿಕೊನೆ ಆಗುತ್ತಾ ಬಂತು. ಆ ಕೆಲಸವನ್ನು ಇವರು ಯಾವಾಗ ಶುರು ಮಾಡುತ್ತಾರೆ, ಮಳೆ ನಮ್ಮಲ್ಲಿ ಈಗಾಗಲೇ ಶುರು ಆಗಿದೆ. ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ಜಲ್ಲಿ ಇಲ್ಲ, ಡಾಂಬರ್ ಇಲ್ಲ, ಟ್ರಜರಿ ಬ್ಯಾನ್ ಇದೆ, ಹಣ ಮಂಜೂರಾತಿ ಆಗಿಲ್ಲ ಅಂತ ಉತ್ತರ ಹೇಳುತ್ತಿದ್ದಾರೆ. ಹಾಗಿದ್ದರೆ ಇವರು ಯಾವಾಗ ಈ ಕೆಲಸಗಳನ್ನು ಮಾಡಿಸಿಕೊಡುತ್ತಾರೆಂದು ನಾನು ಕೇಳ ಬಯಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್: ಅವರು ಈಗ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಈ ದಿವಸವೇ ತೆಗೆಸಿ ನೋಡುತ್ತೇನೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದಿಂದ ಬರುತ್ತಿರುವ ಎಲ್.ಓ.ಸಿ. ಹಣ ಕುರಿತು

574 - ಶ್ರೀ ಬಾಬೂರಾವ್ ಚವಾಣ್ (ಶಹಾಬಾದ್): ಮಾನ್ಯ ಅಬ್ಬುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದಿಂದ ಬರುತ್ತಿರುವ ಎಲ್.ಓ.ಸಿ. ಹಣ ಮತ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದೋ ಅಥವಾ ತಾಲ್ಲೂಕವಾರು ಬಿಡುಗಡೆ ಮಾಡಲಾಗುವುದೋ?*

ಆ) *ಹಾಗಾದರೆ ಸರ್ಕಾರವು ಸರಿಸಮನಾದ ರೀತಿಯಲ್ಲಿ ಶಾಸಕರ ಮತಕ್ಷೇತ್ರಗಳಿಗೆ ಕೊಡುವುದೇ?*

ಇ) *ಈ ಬಗ್ಗೆ ಸರ್ಕಾರದ ನಿಲುವು ಏನು?*

ಶ್ರೀ ರಂಗದೇವ ರಾಯುಲು (ಅಬ್ಬುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಇಲ್ಲ. ಇಲಾಖಾವಾರು ಬಿಡುಗಡೆ ಮಾಡಲಾಗುವುದು.

ಆ) ಭೌತಿಕ ಪ್ರಗತಿಯನ್ನು ಪರಿಗಣಿಸಿ ಹಣವನ್ನು ಹಂಚಲಾಗುತ್ತಿದೆ.

ಇ) ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಿ ಎಲ್ಲಾ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೇ, ನಾನು ಕೇಳತಕ್ಕಂಥ ಪ್ರಶ್ನೆ ಏನೆಂದರೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಿಂದ ಎಂ.ಎಲ್.ಎ. ಗ್ರಾಂಟ್ಸ್ ಮತ್ತು ನಾನ್. ಎಂ.ಎಲ್.ಎ ಗ್ರ್ಯಾಂಟ್ಸ್ ಅಂತ ಎರಡು ರೂಪದಿಂದ ಸರ್ಕಾರದಿಂದ ಹಣ ಬಿಡುಗಡೆ ಆಗುತ್ತಿದೆ. ಆದರೆ ಎಂ.ಎಲ್.ಎ ಗ್ರ್ಯಾಂಟ್ಸ್‌ನಲ್ಲಿ ಪ್ರತಿ ಎಂ.ಎಲ್.ಎ.ಗೆ ಒಂದು ಕೋಟಿ 50 ಲಕ್ಷ ರೂಪಾಯಿಯನ್ನು 3 ವರ್ಷಗಳಿಗೋಸ್ಕರ ಕೊಟ್ಟಿದ್ದೀರಿ. ಆದರೆ ಒಂದು ತಾಲ್ಲೂಕಿನಲ್ಲಿ ಮೂರು ಜನ ಶಾಸಕರುಗಳು ಇರುವುದರಿಂದ ತಾಲ್ಲೂಕು ಅಧಿಕಾರಿಗಳು ಬರತಕ್ಕಂಥ ಹಣದಲ್ಲಿ ಸಮವಾಗಿ ಖರ್ಚು ಮಾಡಬೇಕಾಗಿತ್ತು.ಆದರೆ ಅವರು ಏನು ಮಾಡಿದ್ದಾರೆಂದರೆ ಹೆಚ್.ಕೆ.ಡಿ.ಪಿ. ದುಡ್ಡನ್ನು ಒಬ್ಬರು ಶಾಸಕರಿಗೆ ಜಾಸ್ತಿ ಖರ್ಚು ಮಾಡಿದ್ದಾರೆ ಇನ್ನೊಬ್ಬ ಶಾಸಕರಿಗೆ ಖರ್ಚು ಮಾಡಿಲ್ಲ. ಏಕೆಂದರೆ ಕೆಲಸವನ್ನೇ ಶುರು ಮಾಡಿಲ್ಲ. ಒಬ್ಬ ಶಾಸಕರಿಗೆ ಕೆಲಸ ಶುರು ಮಾಡಿದ್ದಾರೆ ಮತ್ತು ಜಾಸ್ತಿ ಹಣ ಖರ್ಚು ಮಾಡಿದ್ದಾರೆ. 1.50 ಕೋಟಿ ಮೀರಿ 1.87 ಕೋಟಿವರೆಗೆ ಖರ್ಚು ಮಾಡಿದ್ದಾರೆ. 1.50 ಕೋಟಿಯನ್ನು ಕ್ರಾಸ್ ಮಾಡಲಿಕ್ಕೆ ಯಾರು ಅಧಿಕಾರ ಕೊಟ್ಟರು. ಹಾಗೆ ಇನ್ನೊಬ್ಬ ಶಾಸಕರಿಗೆ ಹಣ ಖರ್ಚು ಮಾಡಿಲ್ಲ. ಕೆಲಸ ಶುರು ಮಾಡಿಲ್ಲ. ಒಂದು ತಾಲ್ಲೂಕಿನಲ್ಲಿ 3 ಜನ ಎಂಎಲ್ಎ ಇರುವುದರಿಂದ ಸರಿಸಮಾನವಾದ ರೀತಿಯಲ್ಲಿ ಅಧಿಕಾರಿಗಳು ಖರ್ಚು ಮಾಡುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ, ತಾವು ಎಂ.ಎಲ್.ಎ ಗ್ರ್ಯಾಂಟ್ಸ್ ಅಂತ ಏನು ಕೊಡುತ್ತಿದ್ದೀರಿ